**ಅನ್ಯ ಸಂಸ್ಕೃತಿಯಿಂದ ಕದ್ದು ತಂದದ್ದಲ್ಲ. ಕುಪ್ರಾಸ**
**ಅಥವಾ ಕೋಡಿ**
**ಹರಿಯುವ ಹಸಿಹಸೀಭಾವವಿರದಪ್ಪಟ ಪುಡಿ.**

**ಕಾವ್ಯ ಬರೆಯುವ ಕೆಲಸ ಈಗ ಅತಿ ಸುಲಭ,**
**ಎಳೆಯ ಮಕ್ಕಳಿಗು ಸಾಧ್ಯ ಕಾವ್ಯ.**
**ಎರಡು ಚಿಟಿಕೆ ಪುಡಿಗುಗುರು ಬೆಚ್ಚಗಿನೊಂದು**
**ಚಮಚ ಕೆನೆ ಹಾಲು ಸಾಕು ಸಾನೆಟ್ಟಿಗೆ.**
**ಕಾವ್ಯರಚನಾ ಸ್ಪರ್ಧೆ ಕವಿಮೇಳ ಕನ್ನಡ ಹಬ್ಬ**
**ಯುಗಾದಿ ದೀಪಾವಳಿ-ತಕ್ಕ ಕವನಗಳನ್ನು**
**ತತ್‌ಕ್ಷಣವೆ ಕೊಡುವ ಪುಡಿ.**
**ಹೆಸರಾದ ದಿನಪತ್ರಿಕೆಯ ಭಾನುವಾರದ ಕವನಗಳೆ**
**ಸಾಕು**
**ಭಟ್ಟರ ತ.ಕಾ. ಪುಡಿಯ ಯಥಾರ್ಥತೆಯ ಸಾಬೀತಿಗೆ.**
**ಸಂಪೂರ್ಣ ತೃಪ್ತಿ ಗ್ಯಾರಂಟಿ ನಿಮಗೆ.**

(ಈಗ ಯಾವ ದಿನಪತ್ರಿಕೆಯ ಭಾನುವಾರದ ಪುರವಣಿಯಲ್ಲೂ ಕವನಗಳಿರುವುದಿಲ್ಲ. ಕವನಗಳಿರುವುದು ಬಹುಶಃ ಫೇಸ್‌ಬುಕ್ಕಿನಲ್ಲಿ ಮಾತ್ರ)

ಈ ಕವನದಲ್ಲಿರುವ ವಿಡಂಬನೆ ಸ್ವಯಂವೇದ್ಯ. ಆದರೆ ರಾಜಮಹಾರಾಜರ ಆಸ್ಥಾನಗಳಲ್ಲಿ ತತ್‌ಕ್ಷಣ ಕವಿತೆ ಹೊಸೆದುಕೊಡುತ್ತಿದ್ದ ಆಶುಕವಿಗಳಿರಲಿಲ್ಲವೆ? ಮಸಾಲೆದೋಸೆಯಿಂದ ಹಿಡಿದು ಅಂತರಿಕ್ಷ ನೌಕೆಯವರೆಗೆ ಕಂದ, ಸೀಸ, ಷಟ್ಪದಿ, ರಗಳೆ ಹೀಗೆ ಯಾವ ಛಂದಸ್ಸಿನಲ್ಲಾದರೂ ತತ್‌ಕ್ಷಣ ಕಾವ್ಯ ರಚಿಸಿಕೊಡಬಲ್ಲ ಅವಧಾನ ಕಲೆಯೇ ನಮ್ಮಲ್ಲಿದೆಯಲ್ಲ? ನಾನು ಓದಿದ ಹೈಸ್ಕೂಲಿನಲ್ಲಿ ಒಬ್ಬ ಕನ್ನಡ ಪಂಡಿತರಿದ್ದರು. ಊರಿಗೆ ದೊಡ್ಡ ಮನುಷ್ಯರು ಯಾರು ಬಂದರೂ ಅವರಿಗೆ ಒಂದು ಬಿನ್ನವತ್ತಳೆ ಅರ್ಪಿಸಲಾಗುತ್ತಿತ್ತು. ಆ ಬಿನ್ನವತ್ತಳೆಯಲ್ಲಿ ಅವರು ರಚಿಸಿದ ಕಂದ, ಸೀಸ ಪದ್ಯಗಳ ಒಂದು ಕಾವ್ಯ ಇದ್ದೇ ಇರುತ್ತಿತ್ತು. ಆ ಕಾವ್ಯದಲ್ಲಿ ಮುಖ್ಯವಾಗಿ ದೊಡ್ಡ ದೊಡ್ಡ ಮಾತುಗಳಿರುತ್ತಿದ್ದವು; ಯಾರಿಗೆ ಬಿನ್ನವತ್ತಳೆ ಅರ್ಪಿಸಲಾಗುತ್ತಿತ್ತೋ ಅವರು ಇಂದ್ರ ಚಂದ್ರ ದೇವೇಂದ್ರರಾಗಿರುತ್ತಿದ್ದರು!

1994ರಷ್ಟು ಹಿಂದೆ ನಾನು ಮದರಾಸಿನಲ್ಲಿದ್ದಾಗ ನನಗೆ ಆತ್ಮೀಯರಾಗಿದ್ದವರು ಸಿನಿಮಾ ಹಿನ್ನೆಲೆ ಗಾಯಕ ಪಿ.ಬಿ. ಶ್ರೀನಿವಾಸ್. ತುಪ್ಪುಳದ ಟೋಪಿಯನ್ನೋ ಸರಿಗೆ ರುಮಾಲನ್ನೋ ಧರಿಸಿರುತ್ತಿದ್ದ ಅವರು ಸದಾ ಕಾಲ ತಮ್ಮ ಬಗಲ ತುಂಬ ಒಂದು ಕಂತೆ ಪುಸ್ತಕಗಳನ್ನು ಇಟ್ಟುಕೊಂಡಿರುತ್ತಿದ್ದರು. ಜೇಬಿನ ತುಂಬ ಹತ್ತಾರು ಪೆನ್ನುಗಳಿರುತ್ತಿದ್ದವು. ಆ ಕಾಲದಲ್ಲಿ ಅಷ್ಟೇನೂ ಬೇಡಿಕೆಯಿರದಿದ್ದ ಅವರು ದಿನದ ಬಹುಭಾಗವನ್ನು, ಬಹುಶಃ ಮದರಾಸಿನ ವಿಪರೀತ ಬಿಸಿಲಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ, ನಮ್ಮ ಕಚೇರಿಯ ಹವಾನಿಯಂತ್ರಿತ ಲೈಬ್ರರಿಯಲ್ಲಿ ಹಾಗೂ ಕ್ಯಾಂಟೀನಿನಲ್ಲಿ ಕಳೆಯುತ್ತಿದ್ದರು. 1996ರಲ್ಲಿ ನಮ್ಮ ಕಚೇರಿ ಸೆಕ್ಯೂರಿಟಿ ಸಿಪಾಯಿಗಳ ಭದ್ರಕೋಟೆಯಾಯಿತು. ಆಗ ಅವರು ನಮ್ಮ ಕಚೇರಿಯ ಎದುರಿಗೇ ಇದ್ದ ವುಡ್‌ಲ್ಯಾಂಡ್ಸ್ ಡ್ರೈವ್-ಇನ್‌ಗೆ ಸ್ಥಳಾಂತರಗೊಂಡರು. ನಾನು ಕೆಲವು ದಿನ ಕಚೇರಿಯ ಕೆಲಸ ಮುಗಿದ ಮೇಲೆ ಅವರನ್ನು ಅಲ್ಲಿ ಭೇಟಿಯಾಗುತ್ತಿದ್ದೆ. ಅಂಥ ಒಂದು ಸಂಜೆ ಅವರು ಮೂರು ನಾಲ್ಕು ನಿಮಿಷಗಳಲ್ಲೇ ಬರೆದು ನನಗೆ ಸಮರ್ಪಿಸಿದ ಕವನ ಇಲ್ಲಿದೆ ನೋಡಿ.

ಇಂಥ ಕಾವ್ಯವನ್ನು ಸಮಯಸ್ಫೂರ್ತಿಯಿಂದ ಸೃಷ್ಟಿಯಾದ ಸಾಮಯಿಕ ಕಾವ್ಯ ಎನ್ನೋಣ. ಆದರೆ ಗೋಪಾಲಕೃಷ್ಣ ಅಡಿಗರ 'ಪ್ರಾರ್ಥನೆ' ಕವನದಲ್ಲಿ – 'ತೇಗಿಗೊಂದು ಅಮೋಘ ಸ್ಫೂರ್ತಿಗೀತವ ಕರೆವ ರೋಗದ ಫಸಲನಾದಷ್ಟು ಸವರೋ ತಂದೆ' ಎಂಬುದೊಂದು ಸಾಲಿದೆಯಲ್ಲ, ಅದು ಸ್ಫೂರ್ತಿಯಿಂದ ಕಾವ್ಯ ರಚಿಸುವುದೇ ಒಂದು ರೋಗ ಎನ್ನುತ್ತದೆ. ಅಂಥ ರೋಗ ಯಾವುದೂ ಇಲ್ಲದ ನಿಜವಾದ ಕವಿಕಾವ್ಯ ಎಂಬುದಿದೆಯೆ? ಡಿವಿಜಿ ಒಂದೆಡೆ ಬರೆದಿರುವಂತೆ, 'ಕವಿಯೆಂಬಾತನಲ್ಲಿ ಇತರ ಮನುಷ್ಯರಲ್ಲಿ ಸ್ಫುಟವಾಗಿ ಕಾಣಬಾರದ ಮೂರು ಅಂತರಂಗ ಶಕ್ತಿಗಳು ವಿಶೇಷವಾಗಿರುತ್ತವೆ: ಮೊದಲನೆಯದು ಲೋಕಜೀವನದ ಸೂಕ್ಷ್ಮರಹಸ್ಯವೇದಿಕೆ. ಇದೇ ಅಂತರನುಭವ. ಇದೇ ಪ್ರತಿಭೆ. ಎರಡನೆಯದು ಆ ರಹಸ್ಯಾನುಭವದಿಂದ ಒದಗಿದ ಸಾಮಗ್ರಿಯ ಮೇಲೆ ಸ್ವೋಪಜ್ಞತೆಯ ಪ್ರಯೋಗದಿಂದ – ಅವನ ರಮ್ಯಾರಮ್ಯ ವಿವೇಕದಂತೆ – ಅವನ ಹಿತಾಹಿತ ನಿಷ್ಕರ್ಷೆಯಂತೆ – ಅವನ ಮನೋರಂಗದಲ್ಲಿ ಆದ ನೂತನ ಕಥಾವಿರ್ಭಾವ. ಇದೇ ಕಲ್ಪನ ಸ್ಫೂರ್ತಿ. ಕವಿಯ ಮೂರನೆಯ ಶಕ್ತಿ. ಹಾಗೆ ಸಿದ್ಧವಾದ ಅಂತಸ್ಸೃಷ್ಟಿಯ ಬಹಿರ್ನಿರೂಪಣೆ. ಇದೇ ಕಾವ್ಯರಚನೆ. ಇದೇ ವಾಕ್ಸಿದ್ಧಿ.'